

# ‘ಜಗದೊಳುಪಕಾರಿಯಾದವಂ...’

# ಲಕ್ಷ್ಮೀಶನ ಜೈಮಿನಿ ಭಾರತ

## ಕವಿ–ಕಾವ್ಯ ಅವಲೋಕನ

ಹಳಗನ್ನಡ ಸಾಹಿತ್ಯದ ರುಚಿ ಮತ್ತು ಅಂದವನ್ನು ಓದುಗರಿಗೆ ಪರಿಚಯಿಸುವ ಮಾಲಿಕೆ ‘ನಿಚ್ಚಂ ಪೊಸತು’. ಪಳಗಿದ ಓದುಗರಿಗೆ ಹಳಗನ್ನಡದ ಚೆಲುವನ್ನು ನೆನಪು ಮಾಡಿಕೊಡುವ, ಹೊಸ ಓದುಗರಿಗೆ ಅದರ ರುಚಿಯನ್ನು ತಾಕಿಸುವ ಉದ್ದೇಶದ ಈ ಮಾಲಿಕೆ – ಹಳಗನ್ನಡ ಕಾವ್ಯದ ಆಯ್ದ ಪ್ರಖರ ಪದ್ಯಭಾಗಗಳನ್ನಿಟ್ಟುಕೊಂಡು ಅವುಗಳ ಸ್ವಾರಸ್ಯ, ಭಾಷಾವಿಶೇಷ, ಛಂದಸ್ಸು, ರಸಾಸ್ವಾದದ ಸಾಧ್ಯತೆಗಳ ಕುರಿತು ಚರ್ಚಿಸಲಿದೆ.

ಲಕ್ಷ್ಮೀಶ ಕವಿಯ ಜೈಮಿನಿ ಭಾರತದಲ್ಲಿ ಸೀತಾ ಪರಿತ್ಯಾಗದ ಕಥಾನಕವಿರುವ 19ನೆ ಸಂಧಿಯ 36ನೆಯ ಪದ್ಯದಲ್ಲಿ ‘ಜಗದೊಳುಪಕಾರಿಯಾದವಂ ತನ್ನ ನೋವಂ ನೋಳ್ಪನೆ’ ಎಂಬ ವಾಕ್ಯ ಬರುತ್ತದೆ. ಅಶ್ವಮೇಧಯಾಗ ಮತ್ತು ಆ ಕಾರಣದಿಂದ ಒದಗುವ ಅನೇಕ ಯುದ್ಧ ವಿವರಗಳನ್ನು ಕವಿ ಅದೆಷ್ಟೇ ವರ್ಣಿಸಿದರೂ ಅವನ ಅಂತರಂಗ ತುಡಿಯುವುದು ಕರುಣೆಯ ಕಡೆಗೇ. ಕಷ್ಟದಲ್ಲಿರುವವರನ್ನು ಕಂಡು ಮರುಕ ತಾಳದವರು ಮನುಷ್ಯರೇ, ಸಜ್ಜನರಿಗಾದ ಹಾನಿಯನ್ನು ಸೈರಿಸಬಹುದೇ ಎಂಬೀಥರದ ಮಾತುಗಳು ಜೈಮಿನಿ ಭಾರತದಲ್ಲಿ ಪುನರಾವರ್ತನೆಯಾಗಿ ಬರುತ್ತವೆ.

ಈ ಮೇಲಿನ ಮಾತುಗಳಿಂದಲೇ ಯಾಕೆ ಸದರಿ ಕವಿ–ಕೃತಿ ಅವಲೋಕನ ಆರಂಭಿಸಬೇಕಾಯಿತೆಂದರೆ 1940ರ ದಶಕದಲ್ಲಿ ಚಿಕ್ಕಮಗಳೂರಿನ ಕಡೂರು ಸಮೀಪದ ಲಕ್ಷ್ಮೀಶನ ಜನ್ಮಸ್ಥಳ ದೇವನೂರಿನಲ್ಲಿ ಕವಿಯ ಜಯಂತಿಯು ವಿಜೃಂಭಣೆಯಿಂದ ನಡೆಯಲು ಆ ಗ್ರಾಮದ ಎಲ್ಲರೂ ಕಾರಣರಾದಂತೆ ಊರಿನ ಪಟೇಲ ಮಹಮದ್ ಹಯಾತ್ ಸಾಹೇಬರೂ